5044 (5321) ಶ್ರೀ ಮಾಮನಿ ವಿಶ್ವನಾಥ್ ಕರಬಸಪ್ಪ (ಪರಸಗಡ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಸವದತ್ತಿ ತಾಲ್ಲೂಕಿನ ತಲ್ಲೂರ ಮತ್ತು ಸತ್ತಿಗೇರಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರಾತಿ ಕುರಿತು ಅವಶ್ಯಕ ಎಲ್ಲಾ ದಾಖಲೆಗಳನ್ನು ಲಗತ್ತಿಸಿ ಪ್ರಸ್ತಾವನೆ ಸಲ್ಲಿಸಿರುವುದು ನಿಜವೇ;

2. ಹಾಗಿದ್ದರೆ, ಮಂಜೂರಿಗೆ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3. ಇಲಾಖೆಗೆ 2 ಎಕರೆ ಜಮೀನು ಹಸ್ತಾಂತರಿಸಿದ್ದು, 1 ಲಕ್ಷ ರೂ.ಗಳ ಠೇವಣಿ ಇಟ್ಟ ಬಗ್ಗೆ ಪಾಸ್ ಬುಕ್ ಹಾಜರಿಪಡಿಸಿದ್ದರೂ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು ವಿಳಂಬಕ್ಕೆ ಕಾರಣಗಳೇನು;

4. ಈಗಲಾದರೂ ಈ ಪ್ರಸ್ತಾವನೆಯನ್ನು ಪರಿಗಣಿಸಿ ಮಂಜೂರು ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎನ್. ಚಲುವರಾಯಸ್ವಾಮಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

1. ನಿಜ

2. ಸವದತ್ತಿ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆ – 273533 ಇದ್ದು ಈಗಾಗಲೇ 16 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಅದರಂತೆ ಇಲ್ಲಿ ಹೆಚ್ಚುವರಿಯಾಗಿ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇರುವುದರಿಂದ ಹೊಸ ಕೇಮದ್ರಗಳ ಮಂಜೂರಾತಿಗೆ ಅವಕಾಶವಿರುವುದಿಲ್ಲ.

3. ಅನ್ವಯಿಸುವುದಿಲ್ಲ.

4. ಮಾರ್ಗಸೂಚಿ ಪ್ರಕಾರ ಹೆಚ್ಚಿನ ಕೇಂದ್ರಗಳಿರುವುದರಿಂದ ಹೊಸ ಮಂಜೂರಾತಿಗೆ ಅವಕಾಶವಿರುವುದಿಲ್ಲ.

5045 (6000) Sri. Manohar Kallappa Kinekar (uchagaon) :- Minister for Public Works & Energy

a) The length of the MDR roads in kms which are under the jurisdiction of ZP in Uchagaon constituency, villagewise details to be given);

b) The condition of these roads, whether buses and other vehicles can ply on those roads.

c) The amount spent for maintenance and repairs of these roads for year 2003-04, 2004-05 (details to be given);

d) The amount required for remctaling and Asphalting of these roads.

e) Whether the Government will sanction the required amount for the maintenance of these roads?

Sri. H.D. Revanna Minister for Public Works & Energy

a) The village road 11.50 kms (Kinaye Vaghavade road via Ranakunde, Santibastwad upto NH 4 near Desur Railway station) which

is upgraded as MDR is not yet handed over to PWd by Zilla Panchayat Engineering Division, Belgaum. The road is still under the maintenance of ZPE division, Belgaum and not yet handed over to PWD.

b) Buses and other vehicles can ply on this road except the stretch between Ranakunde to Toorthkunde road (3km) and Baghvade to NH 4A near Desur Railway Station. (4km)

c) No amount has been spent for maintenance and repairs of this road for the year 03-04, 04-05 by PWD since the road was under maintenance of Zilla Panchayat Engineering Division Belgaum.

d) An amount of Rs. 110 lakhs is required for improvement of this entire 11.50 km road.

e) After handing over this road by Zilla Panchayat Engineering Division, Belgaum to PWD the road will be maintained under available annual maintenance grants

5046 (5733) ಶ್ರೀ ನರೇಂದ್ರಬಾಬು. ನೆ.ಲ. (ರಾಜಾಜಿನಗರ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಬೆಂಗಳೂರು ಜಿಲ್ಲೆಯಲ್ಲಿ ಹಾಗೂ ಇತರೆಡೆಗೆ ಎಷ್ಟು ಅನಧಿಕೃತ ಶಾಲೆಗಳನ್ನು ಮುಚ್ಚಲಾಗಿದೆ;

ಆ) ಇಂತಹ ಶಾಲೆಗಳಲ್ಲಿ ಕಲಿಯುತ್ತಿದ್ದ ಎಷ್ಟು ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ ;

ಇ) ಹೀಗೆ ಶಾಲೆಯಿಂದ ಹೊರಬಿದ್ದಿರುವ ಭಾಷಾ ಅಲ್ಪಸಂಖ್ಯಾತರು (ಉರ್ದು/ಮರಾಠಿ/ತೆಲುಗು/ತಮಿಳು/ಮಲೆಯಾಳಂ) ಇವರುಗಳಿಗೆ ಎಂತಹ ಪರ್ಯಾಯ ಶಾಲಾ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸುತ್ತಿದ್ದಾರೆ; (ವಿವರ ನೀಡುವುದು)?

ಶ್ರೀ ಆರ್. ರಾಮಲಿಂಗರೆಡ್ಡಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು.

ಅ) ಬೆಂಗಳೂರು ನಗರಕ್ಕೆ ಇತರೆಡೆ ಒಟ್ಟು 436 ಖಾಸಗಿ ಅನಧಿಕೃತ ಪ್ರಾಥಮಿಕ ಶಾಲೆಗಳನ್ನು ಮತ್ತು 31 ಪ್ರೌಢಶಾಲೆಗಳನ್ನು ಮುಚ್ಚಿಸಲಾಗಿದೆ.

ಆ) ಅನಧಿಕೃತ ಶಾಲೆಗಳನ್ನು ಮುಚ್ಚಿಸಿ ಇಂತಹ ಶಾಲೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳನ್ನು ಹತ್ತಿರದ ಸರ್ಕಾರಿ ಮತ್ತು ಮಾನ್ಯತೆ ಹೊಂದಿದ ಶಾಲೆಗಳಿಗೆ ಪ್ರವೇಶ ನೀಡಲು ಸೂಚನೆಗಳನ್ನು ನೀಡಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಇ) ಮುಚ್ಚಿಸಿರುವ ಅನಧಿಕೃತ ಶಾಲೆಗಳಲ್ಲಿ ಭಾಷಾ ಅಲ್ಪಸಂಖ್ಯಾತರ ಶಾಲೆಗಳಿರುವುದಿಲ್ಲ.

5047 (5737) ಶ್ರೀ ಪದ್ಮನಾಭ್ ಕೊಟ್ಟಾರಿ ಕೆ. (ವಿಟ್ಲ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಬಂಟ್ವಾಳ ತಾಲ್ಲೂಕು ವಿಟ್ಲದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರವನ್ನು ಯಾವ ಸಾಲಿನಲ್ಲಿ ಮೇಲ್ದರ್ಜೆಗೇರಿಸಲಾಯಿತು; ಮೇಲ್ದರ್ಜೆಗೇರಿಸಿದ ನಂತರ ಆರೋಗ್ಯ ಕೇಂದ್ರಕ್ಕೆ ಸೂಕ್ತ ಪ್ರಮಾಣದ ಸವಲತ್ತು ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆಯೇ;